ಪಟ್ಟಿ

ಅ) ಚುಕ್ಕೆ ಗುರುತಿಲ್ಲದೆ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

**ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು):–** ದಿನಾಂಕ 13.07.2007 ರಂದು 5ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 56 ಪ್ರಶ್ನೆಗಳ ಪೈಕಿ 47 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಅಧ್ಯಕ್ಷರು:–** ಮಂಡಿಸಲಾಯಿತು. ಈಗ ಶೂನ್ಯವೇಳೆ, ಮಾನ್ಯ ವಿರೋಧ ಪಕ್ಷದ ನಾಯಕರು ಬಿಜಾಪುರದ ಮಹಿಳಾ ವಿಶ್ವವಿದ್ಯಾನಿಲಯದ ಘಟನೆ ಬಗ್ಗೆ ಕೊಟ್ಟಿದ್ದೀರಿ, ಮಾತನಾಡಿ.

2. ಅಧ್ಯಕ್ಷರು ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ಅ) ಬಿಜಾಪುರದ ಮಹಿಳಾ ವಿಶ್ವವಿದ್ಯಾನಲಯದಲ್ಲಿ ಉಪಕುಲಪತಿಗೆ ಆದಂತಹ ಅವಮಾನದ ಬಗ್ಗೆ

**ಶ್ರೀ ಎನ್. ಧರಂಸಿಂಗ್ ( ಮಾನ್ಯ ವಿರೋಧ ಪಕ್ಷದ ನಾಯಕರು):** ನಿನ್ನೆ ಬಿಜಾಪುರ ಜಿಲ್ಲೆಯಲ್ಲಿ ಮಹಿಳಾ ವಿಶ್ವವಿದ್ಯಾನಲಯದಲ್ಲಿ ರಣರಂಗದ ರೀತಿಯಲ್ಲಿ ಸಾಕಷ್ಟು ಗಲಾಟೆ ಆಗಿದೆ. ಇವತ್ತು ಮಹಿಳಾ ವಿಶ್ವ ವಿದ್ಯಾ ನಿಲಯವನ್ನು ಪ್ರಪ್ರಥಮವಾಗಿ ಬಿಜಾಪುರಕ್ಕೆ ಕೊಟ್ಟಿದ್ದಾರೆ.

**ಅಧ್ಯಕ್ಷರು:–** ಏನ್ರೀ ಇದು ಸಂತೆ ಏನ್ರೀ, ಮೂರು ವರ್ಷಗಳಾಯಿತು, ಏತಕ್ಕೆ ಅಲ್ಲಿ ಗುಂಪು ಕಟ್ಟಿಕೊಂಡು ನಂತು ಮಾತನಾಡುತ್ತೀರಿ, ಹಿರಿಯರಿರಬಹುದು, ಮೊದಲು ಟಿ.ವಿ. ಇರಲಿಲ್ಲ, ಈಗ ಟಿ.ವಿ.ಇದೆ ಎಲ್ಲಾ ತೋರಿಸುತ್ತಾರೆ ನೋಡಿ.

**ಶ್ರೀ ಎನ್.ಧರಂಸಿಂಗ್:** ಉಪ ಕುಲಪತಿಗಳಾಗಿ ಅಲ್ಪಸಂಖ್ಯಾತ ಮಹಿಳೆಯಾದ ಡಾ: ಸಯೀದಾ ಅಖ್ತರ್ ರವನ್ನು ಆಗಿನ ಸರ್ಕಾರ